ಕರ್ನಾಟಕ ಸರ್ಕಾರ
Govt.of Karnataka
Office of the,Deputy Commissioner,Dharwad-580001 ಜಿಲ್ಲಾಧಿಕಾರಿಗಳ ಕಾರ್ಯಾಲಯ,ಧಾರವಾಡ-580001
ದೂರವಾಣಿ:0836-2233840,2233880,(ಫ್ಯಾಕ್ಸ್)0836-2747102, e-mail: deo.dharwad@gmail.com

ಕ್ರ: ಎಮ್.ಎಜಿ/ಶಾಸು/ವಹಿ/15/2021-22 ದಿನಾಂಕ: 05-06-2021

## ಪರಿಷ್ಕೃತ ಆದೇಶ

ವಿಷಯ: ಧಾರವಾಡ ಜಿಲ್ಲೆಯಾದ್ಯಂತ ಕೋವಿಡ್-19 ತಡೆಗಟ್ಟುವ ಹಿನ್ನಲೆಯಲ್ಲಿ ಸಾರ್ವಜನಿಕರ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ **ದಿ:07-06-2021 ಬೆ:6-00 ಗಂಟೆಯಿಂದ ದಿ:14-06-2021ರ ಬೆ:6-00 ಗಂಟೆಯವರೆಗೆ** ಧಾರವಾಡ ಜಿಲ್ಲೆಯಾದ್ಯಂತ ಲಾಕ್‌ಡೌನ್ ಮಾಡುವ ಕುರಿತು.

ಉಲ್ಲೇಖ: 1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರ ಪತ್ರ ಕ್ರ:ಆರ್.ಡಿ./158/ಟಿ.ಎನ್.ಆರ್/2020 ದಿನಾಂಕ:03-06-2021

2) ಈ ಕಾಯಾಲಯದ ಆದೇಶ ದಿ:23-05-2021.

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ ಧಾರವಾಡ ಜಿಲ್ಲೆಯಾದ್ಯಂತ ಕೋವಿಡ್-19 ಸೋಂಕು ಹರಡದಂತೆ ಪರಿಣಾಮಕಾರಿಯಾದ ಅನುಸರಣಾ ಕ್ರಮ ಜರುಗಿಸುವದಕ್ಕೆ ಸಂಬಂಧಿಸಿ, ಸಾರ್ವಜನಿಕರ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಮುಂಜಾಗೃತಾ ಕ್ರಮವಾಗಿ ಧಾರವಾಡ ಜಿಲ್ಲೆಯಾದ್ಯಂತ ದಿ:07-06-2021 ಬೆ:6-00 ಗಂಟೆಯಿಂದ ದಿನಾಂಕ:14-06-2021ರ ಬೆ:6-00 ಗಂಟೆಯವರೆಗೆ ಉಲ್ಲೇಖ-2ರಲ್ಲಿ ಒಳಗೊಂಡ ಮಾರ್ಗಸೂಚಿಯನ್ವಯ ಲಾಕ್‌ಡೌನ್ ಮಾಡಿ ಈಗಾಗಲೇ ಆದೇಶಿಸಿದ್ದು ಇರುತ್ತದೆ.

ಮುಂದುವರೆದು ಉಲ್ಲೇಖ-2ರ ಈ ಕಾರ್ಯಾಲಯದ ಆದೇಶದನ್ವಯ ಈಗಾಗಲೇ ಕೆಲವೊಂದು ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಆದೇಶಿಸಲಾಗಿದೆ. ಅದರ ಜೊತೆಗೆ ಈ ಕೆಳಗೆ ಹೇಳಿದ ಅಂಶಗಳನ್ನು ಸಹ ತಪ್ಪದೇ ಪಾಲಿಸಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

1) ಆಹಾರ, ದಿನಸಿ, ಬೇಕರಿ, ಕಿರಾಣಿ, ಹಣ್ಣು ಮತ್ತು ತರಕಾರಿ. ಡೈರಿ, ಹಾಲಿನ ಬೂತುಗಳು, ಮಾಂಸ ಮತ್ತು ಮೀನು, ಪಶು ಆಹಾರದ ಅಂಗಡಿಗಳು, ದಿ:07-06-2021 ರಿಂದ ದಿ:14-06-2021ರ ವರೆಗೆ ಬೆ:-6-00 ಗಂಟೆಯಿಂದ ಬೆ:10-00 ಗಂಟೆಯವರೆಗೆ ತೆರೆಯಲು ಅವಕಾಶವಿರುತ್ತದೆ.

2) ನ್ಯಾಯ ಬೆಲೆ ಅಂಗಡಿಗಳು ದಿ:07-06-2021 ರಿಂದ ದಿ:14-06-2021ರ ವರೆಗೆ ಬೆ:-6-00 ಗಂಟೆಯಿಂದ ಅ: 12-00 ಗಂಟೆಯವರೆಗೆ ತೆರೆಯಲು ಅವಕಾಶವಿರುತ್ತದೆ.

3) ಧಾರವಾಡ ಜಿಲ್ಲೆಯಾದ್ಯಂತ ದಿ:07-06-2021 ರಿಂದ ದಿ:14-06-2021ರ ವರೆಗೆ ಬೆ:-6-00 ಗಂಟೆಯಿಂದ ಬೆ:10-00 ಗಂಟೆಯವರೆಗೆ ಹೊಟೇಲ್ ಅಂಗಡಿಗಳು ತೆರೆದು ಕೋವಿಡ್ ಸುರಕ್ಷತಾ ಕ್ರಮಗಳೊಂದಿಗೆ ಆಹಾರ ಪದಾರ್ಥಗಳನ್ನು **ಕೇವಲ ಪಾರ್ಸಲ್** ಕೊಡುವುದಕ್ಕೆ ಅವಕಾಶವಿರುತ್ತದೆ.

4) ಧಾರವಾಡ ಜಿಲ್ಲೆಯಾದ್ಯಂತ ದಿ:07-06-2021 ರಿಂದ ದಿ:14-06-2021ರ ವರೆಗೆ ಬೆ:10-00 ಗಂಟೆಯಿಂದ ಸಾ:08-00 ಗಂಟೆಯವರೆಗೆ ಹೊಟೇಲ್ ಅಂಗಡಿಗಳು ತೆರೆದು ಕೋವಿಡ್ ಸುರಕ್ಷತಾ ಕ್ರಮಗಳೊಂದಿಗೆ **ಕೇವಲ ಹೋಮ್ ಡೆಲಿವರಿಗೆ ಮಾತ್ರ** ಅವಕಾಶವಿರುತ್ತದೆ.

4) ಧಾರವಾಡ ಜಿಲ್ಲೆಯಾದ್ಯಂತ ದಿ:07-06-2021 ರಿಂದ ದಿ:14-06-2021ರ ವರೆಗೆ ಬೆ:-6-00 ಗಂಟೆಯಿಂದ ಬೆ:10-00 ಗಂಟೆಯವರೆಗೆ ಮದ್ಯದ ಅಂಗಡಿಗಳನ್ನು ತೆರೆದು ಕೋವಿಡ್ ಸುರಕ್ಷತಾ ಕ್ರಮಗಳೊಂದಿಗೆ **ಕೇವಲ ಪಾರ್ಸಲ್** ಕೊಡುವುದಕ್ಕೆ ಅವಕಾಶವಿರುತ್ತದೆ.

ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ
ಜಿಲ್ಲೆ ಧಾರವಾಡ
DIST. DHARWAD
DISTRICT MAGISTRATE DHARWAD

Patil NK

**ಜಿಲ್ಲಾಧಿಕಾರಿಗಳು**
**ಧಾರವಾಡ ಜಿಲ್ಲೆ, ಧಾರವಾಡ**

ಪ್ರತಿಗಳು:

1. ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಅಭಿನಂದನೆಗಳೊಂದಿಗೆ ಕಳುಹಿಸಿದೆ.
2. ಆರಕ್ಷಕ ಅಧೀಕ್ಷಕರು, ಧಾರವಾಡ ಜಿಲ್ಲೆ, ಧಾರವಾಡ ಇವರಿಗೆ ಮಾಹಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಅಭಿನಂದನೆಗಳೊಂದಿಗೆ ಕಳುಹಿಸಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಅಭಿನಂದನೆಗಳೊಂದಿಗೆ ಕಳುಹಿಸಿದೆ.
4. ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ಉಪವಿಭಾಗಾಧಿಕಾರಿಗಳು, ಧಾರವಾಡ ಇವರಿಗೆ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಜಿಲ್ಲೆಯ ಎಲ್ಲ ತಹಶೀಲದಾರರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

D:\Vmayakaswami\Lock Down Kannada Order 24-05-2021 -07-06-2021.docx